# ಪುಸ್ತಕಗಳಿಗಿಂತ ಸ್ನೇಹಿತರಿಲ್ಲ

**ಇತ್ತೀಚಿನ ದಿನಗಳಲ್ಲಿ ಪುಸ್ತಕಗಳನ್ನು ಓದುವವರು ಕಡಿಮೆ ಆಗಿದ್ದಾರೆಯೆ?**

**★ಪ.ನಾ.ಹಳ್ಳಿ ಹರೀಶ್ ಕುಮಾರ್**

ಪ್ರತೀ ವರ್ಷ ಏಪ್ರಿಲ್ 23ಅನ್ನು 'ವಿಶ್ವ ಪುಸ್ತಕ ದಿನ'ವನ್ನಾಗಿ ಆಚರಿಸಲಾಗುತ್ತದೆ. ಇದನ್ನು 'ಅಂತರರಾಷ್ಟ್ರೀಯ ಪುಸ್ತಕ ದಿನ'ವೆಂದೂ ಕರೆಯುವುದುಂಟು. ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುನೆಸ್ಕೋ 1995ರಲ್ಲಿ ಮೊದಲ ಬಾರಿಗೆ ಓದುವಿಕೆ, ಪ್ರಕಾಶನ ಮತ್ತು ಕೃತಿಸ್ವಾಮ್ಯಗಳ ಬಗ್ಗೆ ಅರಿವು ಮತ್ತು ಪ್ರಚಾರ ನೀಡಲು ಈ ಕಾರ್ಯಕ್ರಮವನ್ನು ಆರಂಭಿಸಿತು. ನೂರಕ್ಕೂ ಹೆಚ್ಚು ರಾಷ್ಟ್ರಗಳ ಸಹಸ್ರಾರು ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು,



ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಸಾಂಸ್ಕೃತಿಕ ಸಂಘಟನೆಗಳು, ಸಾಹಿತ್ಯ ವೇದಿಕೆಗಳು ಈ ದಿನಾಚರಣೆಯಲ್ಲಿ ಪಾಲ್ಗೊಳ್ಳುವ ಮೂಲಕ ಜಗತ್ತಿನ ಜನರಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಪ್ರಯತ್ನಿಸುತ್ತಿವೆ.

ಹಿನ್ನೆಲೆ: 1923ರ ಏಪ್ರಿಲ್ 23ರಂದು ಸ್ಪೇನ್‌ನಲ್ಲಿ ವಿಶ್ವ ಸಾಹಿತ್ಯ ಕ್ಷೇತ್ರಕ್ಕೆ 'ಡಾನ್ ಕ್ವಿಕ್ಸೋಟ್ಸ್' ಕೃತಿಯನ್ನು ರಚಿಸಿಕೊಟ್ಟ ಮಹಾನ್ ಲೇಖಕ ಸೆರ್ವಾಂಟಿಸ್ ನಿಧನರಾದರು. ಅವರ ಸ್ಮರಣಾರ್ಥ ಸ್ಪೇನ್ ನ ಪುಸ್ತಕ ವ್ಯಾಪಾರಿಗಳು ಹಾಗೂ ಪ್ರಕಾಶಕರು ಪ್ರತೀ ವರ್ಷ ಆ ದಿನವನ್ನು ಪುಸ್ತಕ ದಿನವನ್ನಾಗಿ ಆಚರಿಸಲು ಪ್ರಾರಂಭಿಸಿದರು. ಮತ್ತೊಂದು ಸ್ವಾರಸ್ಯವೆಂದರೆ ಅದೇ ಏಪ್ರಿಲ್ 23ರಂದು ಖ್ಯಾತ ಕಾದಂಬರಿಕಾರ ಷೇಕ್ಸ್‌ಪಿಯರ್ ಜನ್ಮದಿನವೂ ಮತ್ತು ಮರಣ ದಿನವೂ ಹೌದು. ಅದಕ್ಕಾಗಿಯೇ ವಿಶ್ವಸಂಸ್ಥೆಯು ಆ ದಿನವನ್ನು ವಿಶ್ವ ಪುಸ್ತಕ ದಿನವನ್ನಾಗಿ ಆಚರಿಸಲು ಕರೆ ಕೊಟ್ಟಿದೆ. ವಿವಿಧ ಪುಸ್ತಕಗಳು, ಲೇಖಕರು, ಪ್ರಕಾಶಕರು ಹಾಗೂ ಮುದ್ರಕರ ಕುರಿತು ಜಾಗೃತಿ ಮೂಡಿಸುವುದೇ ಈ ದಿನವನ್ನು ಆಚರಿಸುವುದರ ಪ್ರಮುಖ ಉದ್ದೇಶ. 1995ರಿಂದೀಚೆಗೆ ಈ ದಿನವನ್ನು ಅಂತರಾಷ್ಟ್ರೀಯ ಪುಸ್ತಕ ದಿನವನ್ನಾಗಿ ಆಚರಿಸಲು ಪ್ರಾರಂಭಿಸಲಾಯಿತು.

ಜಗತ್ತಿನ ಸಂಸ್ಕೃತಿ, ನಾಗರಿಕತೆಗಳಿಗೆ ಪುಸ್ತಕ ಸಂಸ್ಕೃತಿಯೇ ಬುನಾದಿ. ನಮ್ಮ ಜ್ಞಾನದೀವಿಗೆ ಸದಾ ಬೆಳಗಲು ಪುಸ್ತಕಗಳೇ ಮಾರ್ಗಸೂಚಿ. ಲೋಕಜ್ಞಾನವು ಕೇವಲ ಶಾಲಾ ಕಾಲೇಜುಗಳಲ್ಲಿ ಮಾತ್ರ ದೊರಕುತ್ತದೆಯೆಂಬ ಭ್ರಮೆ ಬೇಡ. ಮನೆಯಲ್ಲೊಂದು ಗ್ರಂಥಾಲಯ ಇಟ್ಟುಕೊಂಡರೆ ಸಮೃದ್ಧ ಜ್ಞಾನ ದೊರೆಯುತ್ತದೆ.

ಪುಸ್ತಕಗಳು ಜ್ಞಾನದ ಕಿಟಕಿಗಳಿದ್ದಂತೆ. ಮನೆಯ ಹಿರಿಯರು ಓದುವ ಹವ್ಯಾಸ ರೂಢಿಸಿಕೊಂಡರೆ ಅದರ ಪರಿಣಾಮ ಮಕ್ಕಳ ಮೇಲೂ ಬೀರುವ ಮೂಲಕ ಅವರಲ್ಲಿ ಓದಿನ ಗೀಳನ್ನು ಬೆಳೆಸುತ್ತದೆ. ಅದರಿಂದ ಅವರ ಭಾವ ಸಂಸ್ಕಾರಗೊಳ್ಳುತ್ತದೆ. ಯಾವುದೇ ವಿದ್ವಾಂಸ, ತತ್ವಜ್ಞಾನಿ ಅಥವಾ ಉನ್ನತ ಸಾಧಕರನ್ನು ನೋಡಿ– ಅವರೊಳಗೊಬ್ಬ ಉತ್ತಮ ಓದುಗನಿರುತ್ತಾನೆ. ಓದಿ ತಿಳಿಯುವ ಮೂಲಕವೇ ಅವರು

## ಏಪ್ರಿಲ್ 23 ವಿಶ್ವ ಪುಸ್ತಕ ದಿನ

ಬಹಳಷ್ಟು ಜ್ಞಾನ ಸಂಪಾದನೆ ಮಾಡಿರುತ್ತಾರೆ. ಅದರಿಂದಲೇ ಅವರ ಕಾರ್ಯಸಾಧನೆಗೆ ಅಗತ್ಯವಿರುವಷ್ಟು ಆತ್ಮವಿಶ್ವಾಸ ಪಡೆದುಕೊಂಡಿರುತ್ತಾರೆ.

ಪ್ರತೀ ಐದು ವರ್ಷಗಳಿಗೊಮ್ಮೆ ಜಗತ್ತಿನ ಜ್ಞಾನಮಟ್ಟ ದ್ವಿಗುಣಗೊಳ್ಳುತ್ತದೆ ಎಂಬುದು ಸಮೀಕ್ಷೆಯೊಂದರ ಇಂಗಿತ. ನಾವು ತಿಳಿದ ತಾಂತ್ರಿಕತೆಯು ಪ್ರತೀ 2 ವರ್ಷಕ್ಕೊಮ್ಮೆ ಹಳೆತಾಗುತ್ತದಂತೆ. ಆದ್ದರಿಂದ ಇಂದಿಗಿಂತ ನಾಳೆಗೆ ನಮ್ಮ ಮೌಲ್ಯದಲ್ಲಿ ಹೆಚ್ಚಳವಾಗಬೇಕಾದರೆ ನಾವು ಹೊಸ ವಿಚಾರಗಳತ್ತ ತೆರೆದುಕೊಳ್ಳಬೇಕು. ಅದಕ್ಕಾಗಿ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳುವುದು ಅತ್ಯವಶ್ಯಕ.

'ಕೆಲಸದ ಬ್ಯುಸಿಯಲ್ಲಿ ಓದಲು ಸಮಯವೇ ಸಿಗುವುದಿಲ್ಲ' ಎಂಬುದು ಸೋಮಾರಿಯೊಬ್ಬನ ಸಮರ್ಥನೆ ಆಗಬಹುದೇನೋ. ಆದರೆ ಓದುವ ಹವ್ಯಾಸವುಳ್ಳವರು ಪ್ರತಿದಿನ ಕನಿಷ್ಠ ಅರ್ಧ ಗಂಟೆಯಷ್ಟು ಸಮಯವಾದರೂ ಓದಿನಲ್ಲಿ ಮುಳುಗದಿದ್ದರೆ ಅವರಿಗೆ ಸಮಾಧಾನ ಆಗಲಾರದು. 'ಅನ್ ಟು ದಿ ಲಾಸ್ಟ್' ಎನ್ನುವ ಕೃತಿ ಮಹಾತ್ಮ ಗಾಂಧೀಜಿಯ ಮೇಲೆ ಬೀರಿದ ಪ್ರಭಾವ ಹೇಳತೀರದು. ನಮ್ಮ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ನಾಯಕರೆಲ್ಲರೂ ಒಂದಲ್ಲ ಒಂದು ಪುಸ್ತಕದಿಂದ ಪ್ರಭಾವಿತರಾದವರೇ ಆಗಿದ್ದಾರೆ.

ತಿಂಗಳಿಗೊಂದಾದರೂ ಪುಸ್ತಕವನ್ನು ಖರೀದಿಸುವ ಅಭ್ಯಾಸವನ್ನು ಪುಸ್ತಕ ದಿನದಿಂದಲಾದರೂ ಶುರು ಮಾಡಿ. ಪುಸ್ತಕವನ್ನು ಕೊಂಡು ಓದುವ ಅಭ್ಯಾಸ ರೂಢಿಸಿಕೊಳ್ಳಿ. ಜ್ಞಾನಮಟ್ಟ ಹೆಚ್ಚಿಸಲು ಮತ್ತು ಮನೋವಿಕಾಸಕ್ಕೆ ಪುಸ್ತಕಗಳು ಅವಶ್ಯಕ. ಪುಸ್ತಕ ಓದುವುದು ನಮ್ಮ ಕಲ್ಪನಾಶಕ್ತಿಯನ್ನು ಹೆಚ್ಚಿಸುತ್ತದೆ.

ಉತ್ತಮ ಪುಸ್ತಕಗಳು ನಾಡಿನ ಸಂಸ್ಕೃತಿಯ ಪ್ರತೀಕ. ಪುಸ್ತಕಗಳು ಒಳ್ಳೆಯ ಸ್ನೇಹಿತರಿದ್ದಂತೆ. ವಿವಿಧ ಭಾಷೆಯ, ವಿಷಯಗಳ, ಲೇಖಕರ ಪುಸ್ತಕಗಳನ್ನು ಓದುವುದು ಮತ್ತು ಓದಿದ್ದನ್ನು ಇತರರೊಂದಿಗೆ ಹಂಚಿಕೊಳ್ಳುವುದರಿಂದ ಸ್ವಸ್ಥ ಸಮಾಜವನ್ನು ನಿರ್ಮಿಸಬಹುದು. ಅಂದ ಹಾಗೆ, ವಿಶ್ವ ಪುಸ್ತಕ ದಿನವನ್ನು ಕೃತಿಸ್ವಾಮ್ಯ ದಿನ ವನ್ನಾಗಿಯೂ ಆಚರಿಸಲಾಗುತ್ತಿದೆ.